9-11-24

(10)

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸರ್ಕಾರದ ಉತ್ತರ.**

ಪ್ರಶ್ನೆ

ಮಂಗಳೂರು ವಿಶ್ವವಿದ್ಯಾನಿಲಯವು ಆರ್ಥಿಕ ಸಂಕಷ್ಟಕ್ಕೆ ಒಳಪಟ್ಟು ಕಳೆದ 6 ವರ್ಷಗಳಿಂದ ಸರ್ಕಾರದಿಂದ ಯಾವುದೇ ಅನುದಾನವನ್ನು ನೀಡದೇ ಇರುವುದರಿಂದ, ವಿಶ್ವವಿದ್ಯಾನಿಲಯ ಬೆಳವಣಿಗೆ ಸಂಪೂರ್ಣವಾಗಿ ಕುಂಠಿತಗೊಂಡು ಮತ್ತು ವಿಶ್ವವಿದ್ಯಾನಿಲಯ ನಡೆಸುತ್ತಿರುವ ಅಧೀನ ಕಾಲೇಜುಗಳಲ್ಲಿನ ಬೆಳವಣಿಗೆಯೂ ಒದಗಿಸಲು ಅಸಾಧ್ಯವಾಗಿರುವುದರ ಬಗ್ಗೆ ಇತ್ತೀಚಿಗೆ ಪತ್ರಿಕೆಯಲ್ಲಿ ದೊಡ್ಡದಾಗಿ ಸುದ್ದಿಯಾಗಿದೆ.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ 4 ವರ್ಷಗಳಿಂದ ಒಟ್ಟು 200 ಮಂದಿ ಪ್ರೋಫೆಸರ್ (ಪ್ರಾಧ್ಯಾಪಕರು) ಆಡಳಿತ ವರ್ಗದ ಅಧಿಕಾರಿಗಳು ನಿವೃತ್ತಿ ಹೊಂದಿದ್ದು, ಕಳೆದ 4 ವರ್ಷಗಳಿಂದ ಈ ನಿವೃತ್ತ ಹೊಂದಿದ ನೌಕರರಿಗೆ ವೇತನ ಉಪದಾನ ಕೊಡ ಲಿಲ್ಲವೆಂದು ಸುಮಾರು 40 ರಿಂದ 45 ವರ್ಷಗಳ ಕಾಲ ವಿಶ್ವವಿದ್ಯಾನಿಲಯದಲ್ಲಿ ಮಕ್ಕಳನ್ನು ಬೋಧಿಸಿದ ಮತ್ತು ಉನ್ನತಿಗೆ ಕಾರಣಕರ್ತರಾದ ಪ್ರೋಫೆಸರ್‌ಗಳು ಇಂದು ತಮ್ಮ ನಿವೃತ್ತಿ ಹೊಂದಿದ್ದ ಸಂದರ್ಭದಲ್ಲಿ ವೇತನ ಉಪದಾನಕ್ಕಾಗಿ ಚುನಾಯಿತ ಪ್ರತಿನಿಧಿಗಳಲ್ಲಿ ಮತ್ತು ಸರ್ಕಾರದ ಅಧಿಕಾರಿಗಳ ಮುಂದೆ ಅಲೆದಾಡುತ್ತಿರುವ ಪರಿಸ್ಥಿತಿ ಬಂದಿರುವುದು ಅತ್ಯಂತ ದು:ಖಕರ ವಿಚಾರವಾಗಿದೆ. ಪ್ರಸ್ತುತ ನಿವೃತ್ತ ವೇತನ ಉಪದಾನ ಮತ್ತು ಪಿಂಚಣಿ ನೀಡಲು ರೂ.36 ಕೋಟಿ ಬೇಕೆಂದು ಮಂಗಳೂರು ವಿಶ್ವವಿದ್ಯಾನಿಲಯ ಉಪಕುಲಪತಿಗಳು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಆದುದರಿಂದ ಸದರಿ ಬೇಡಿಕೆಯನ್ನು ಕೂಡಲೇ ಇಡೇರಿಸಲು ಕಳೆದ 4 ವರ್ಷಗಳಿಂದ ನಿವೃತ್ತಿ ಹೊಂದಿದ ಶಿಕ್ಷಕರಿಗೆ ನೌಕರರಿಗೆ ನಿವೃತ್ತಿ ವೇತನ ಉಪದಾನ ಮಾಡಲು ಕೂಡಲೇ ರೂ.36 ಕೋಟಿ ನೀಡಬೇಕೆಂದು ಪ್ರಸ್ತಾಪಿಸಿರುವ ವಿಷಯದ ಬಗ್ಗೆ.

**ಉತ್ತರ**

ಮಂಗಳೂರು ವಿಶ್ವವಿದ್ಯಾಲಯಕ್ಕೆ ಕಳೆದ ಮೂರು ವರ್ಷಗಳಲ್ಲಿ ವಿಶ್ರಾಂತಿ ವೇತನಕ್ಕಾಗಿ ಬಿಡುಗಡೆಗೊಳಿಸಿರುವ ಅನುದಾನದ ವಿವರ ಕೆಳಕಂಡಂತಿದೆ:

(ರೂ.ಲಕ್ಷಗಳಲ್ಲಿ)

| ಆರ್ಥಿಕ ವರ್ಷ | ಬಿಡುಗಡೆಗೊಳಿಸಿದ ಅನುದಾನ |
|---|---|
| 2022-23 | 2561.00 |
| 2023-24 | 1000.00 |
| 2024-25 | 1000.00 |

ಪ್ರಸ್ತುತ ಮಂಗಳೂರು ವಿಶ್ವವಿದ್ಯಾಲಯದ ಕೋರಿಕೆಯಂತೆ, ಹೆಚ್ಚುವರಿ ವಿಶ್ರಾಂತಿ ವೇತನಕ್ಕೆ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸುವ ಕುರಿತು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.

(ಕಡತ ಸಂಖ್ಯೆ: ಇಡಿ 157 ಹೆಚ್‌ಪಿಯು 2024)

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು